**ಓ.ಎಸ್. ನಂಃ 12/22**

**ಪಿ.ಡಬ್ಲ್ಯೂಃ 2**

**ದಿನಾಂಕ 15.04.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಜೆ.ಜಿ. ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

**<u>ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ. ಕೆ .ಆರ್.ಸಿ ವಕೀಲರಿಂದ</u>**

1. ನಾನು ದ್ವಿತಿಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೈಸೂರಿನ ಕೆ.ಹೆಚ್.ಪಿ.ಟಿ. ಎನ್ನುವ ಎನ್.ಜಿ.ಓ.ದಲ್ಲಿ ಕೆಲಸ ಮಾಡುತ್ತೇನೆ. ನನ್ನ ಕೆಲಸದ ಅವಧಿ ಬೆಳಿಗ್ಗೆ 10.00 ರಿಂದ ಸಂಜೆ 5.00 ರವರಗೆ ಇರುತ್ತದೆ. ಸುಮಾರು 10 ವರ್ಷಗಳಿಂದ ನನಗೆ ವಾದಿಯ ಪರಿಚಯವಿದೆ.

2. ದಾವಾ ಆಸ್ತಿಗೆ ಸಂಬಂಧಿಸಿದ ದಾವಾ ಪತ್ರ ಮತ್ತು ಇ-ಖಾತೆಯನ್ನು ನಾನು ನೋಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ – ರಸ್ತೆ ಮತ್ತು ಚರಂಡಿ, ಪಶ್ಚಿಮಕ್ಕೆ –ಆಶ್ರಯ ಯೋಜನೆಯ ನಿವೇಶನ, ಉತ್ತರಕ್ಕೆ-ವಿಜಯ್ ಕುಮಾರ ರವರ ಜಮೀನು ಮತ್ತು ದಕ್ಷಿಣಕ್ಕೆ- ಪ್ರತಿವಾದಿಯರ ಜಮೀನು ಇದೆ. ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿ ನಾನು ವಾಸವಿಲ್ಲ ಎಂದರೆ ಸರಿ.

3. ಪುರಸಭೆಯವರು ಸ್ಥಳ ಪರಿಶೀಲನೆ ಮಾಡಿದ ದಿನಾಂಕ ನೆನಪಿಲ್ಲ ಆದರೆ ಪರಸಭೆಯವರು 2020-2021 ರಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಪುರಸಭೆಯವರು ಸ್ಥಳ ಪರಿಶೀಲನೆ ಮಾಡಲು ಮಧ್ಯಾಹ್ನ 3.00 ಗಂಟೆಗೆ ಬಂದಿದ್ದು, ಇನ್ನೊಂದು ಬಾರಿ ಪುರಸಭೆಯವರು ಸ್ಥಳ ಪರಿಶೀಲನೆ ಮಾಡಲು ಸಂಜೆ 4.00 ಗಂಟೆಗೆ ಬಂದಿದ್ದರು. ಪುರಸಭೆಯವರು ಸ್ಥಳ ಪರಿಶೀಲನೆ ಮಾಡಲು ಬಂದ ದಿನದಂದು ನಾನು

ರಜೆ ಹಾಕಿರಲಿಲ್ಲ ಆದರೆ ಊಟದ ಅವಧಿಗೆ ಪುರಸಭೆಯವರು ಬಂದಿದ್ದ ಕಾರಣ ಜಗಳವಾಗಿರುವುದನ್ನು ನಾನು ನೋಡಿರುತ್ತೇನೆ.

4. ಶಡ್ ಕಟ್ಟಿದ್ದ ವಿಚಾರವಾಗಿ ಜಗಳ ನಡೆದಿರುತ್ತದೆ. ಶಡ್ ಕಟ್ಟಿದ್ದ ವಿವಾದಕ್ಕೆ ಸಂಬಂಧಿಸಿಂತೆ ಪುರಸಭೆಯವರು ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು. ವಾದಿಯೇ ನನ್ನನ್ನು ಇಂದು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ವಾದಿ ನನ್ನ ಸ್ನೇಹಿತನಾಗಿದ್ದು, ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಪ್ರತಿವಾದಿಯರು ಯಾವುದೇ ಶೆಡ್ ಕಟ್ಟಿರುವುದಿಲ್ಲ ಮತ್ತು ಪುರಸಭೆಯವರು ಸ್ಥಳ ಪರಿಶೀಲನೆ ಮಾಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**